Reg No. B G 155 ಶ್ರೀ 11-8-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ.
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳವಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೈಸೂರು ಆಸ್ಪತ್ರೆಗಳ ಹೌಸ್ ಸರ್ಜನ್‌ಗಳಿಂದಲೂ ಸಂಪು

ಮಾನಕಳೆದುಕೊಂಡ ಹೆಂಗಸು

ತಿರುಚರಪಳ್ಳಿ– ಅಮಿತ್ತ ರಾರ್ಯಕೋಟಿಯ ನಾಲ್ಕು ಮಕ್ಕಳ ತಾಯಿಯಾದ ಹರಿಜನ ಮಹಿಳೆಯು ತನ್ನ ಗಂಡನ ಸಂಬಂಧಿಕನೊಬ್ಬನೊಡನೆ ಅಕ್ರಮ ಸಂಭೋಗ ನಡೆಸಿದ್ದಕ್ಕೆ ಸಂಬಂಧೀಕರು ನಿಂದಿಸಿದ್ದಕ್ಕೆ ತನ್ನ ಪಾತಿವ್ರತ್ಯವನ್ನು ಭಂಗಮಾಡಿಕೊಂಡೆನೆಂದು ನೊಂದು ತನ್ನ ನಾಲ್ಕು ಮಕ್ಕಳೊಂದಿಗೆ ತಾನೂ ವಿಷಪ್ರಾಶನ ಮಾಡಿ

ಮುಷ್ಕರ

ಬೆಂಗಳೂರು— ಮೈಸೂರಿನ ಕೃಷ್ಣರಾಜೇಂದ್ರ ಮತ್ತು ಜಲಾವಾಂಬ ಆಸ್ಪತ್ರೆಗಳ ಹೌಸ್‌ಸರ್ಜನ್ನರೂ ತಾ॥ 14 ರಿಂದ ಪ್ರಾರಂಭವಾಗುವ ಹೌಸ್‌ಸರ್ಜನ್ನರ ಮುಷ್ಕರದಲ್ಲಿ ಭಾಗವಹಿಸಲು ನಿರ್ಧರಿಸಿದಾರೆ.

★

12 ವರ್ಷಗಳಿಗೆ ಒಂದು ಸಾರಿ

ಮಧುರೈ— 12 ವರ್ಷಗಳಿಗೊಂದು ಸಾರಿ ಹೂವನ್ನು ಬಿಡುವ ಕುರಂಜ ಗಿಡ ಹೂವನ್ನು ಬಿಡಲು ಪ್ರಾರಂಭಿಸಿದೆ.

★

ಅನ್ನ ಸತ್ಯಾಗ್ರಹ

ಚಿಕ್ಕಬಳ್ಳಾಪುರು— ವ್ಯವಸಾಯದಲ್ಲಿನ ವಿದ್ಯುತ್ ದರದ ಏರಿಕೆ ಪ್ರತಿಭಟಿಸಿ ಸಾಮೂಹಿಕ ಅನ್ನ ಸತ್ಯಾಗ್ರಹವನ್ನು ತಾ॥ 18 ರಂದು ಆಚರಿಸಲು ನಿರ್ಧರಿಸಲಾಗಿದೆ.

★

ಸಿಗರೆಟ್ ದಹನ

ಗ್ರೇಫೀಲ್ಡ್ (ಐಓಹಿ)— ಇಲ್ಲಿಯ 2243 ನಿವಾಸಿಗಳು ಧೂಮಪಾನ ನಿಷೇಧ ಚಳವಳಿಯಲ್ಲಿ ರಾಶಿಗಟ್ಟಿ ಸಿಗರೇಟು, ಸಿಗಾರು ಮತ್ತಿತರ ಹೊಗೇಸೊಪ್ಪು ಪದಾರ್ಥಗಳನ್ನು ದೊಡ್ಡ ಕಿಚ್ಚಿನಲ್ಲಿ ಸುಟ್ಟರು

★

ಶ್ರೀ ಶ್ರೀಕಂಠೇಶ್ವರ ಸುಪ್ರಭಾತ

ನಂಜನಗೂರು— ಶ್ರೀ ಶ್ರೀಕಂಠೇಶ್ವರ ಸುಪ್ರಭಾತದ ಎರಡನೇ ವಾರ್ಷಿಕೋತ್ಸವವು ಸಿನ್ನೆ ವೈಭವವಾಗಿ ನೆರವೇರಿತು. ಸೇವಾಕರ್ತ ಶ್ರೀ ಬಿ. ಎಸ್. ಸುಬ್ಬರಾವ್ ರವರು ಎಲ್ಲವನ್ನೂ ವಿಚಕ್ಷಣೆಯಿಂದ ನೋಡಿಕೊಂಡರು.

ನೀರಿನ ವಿಕ್ರಯ

ತಿರುಪತಿ— ಈ ಯಾತ್ರಾಸ್ಥಳದಲ್ಲಿ ನೀರಿನ ಅಭಾವ ಹೆಚ್ಚಾಗಿದ್ದು ಅನೇಕ ಕಡೆ ನೀರು ಬಹಿರಂಗವಾಗಿ ಮಾರಲಾಗುತ್ತಿದೆ.

★

ಕಳ್ಳನಿಗೂ ಪೆನ್‌ಷನ್

ಮೋಡ್ರೆಸ್ (ಯುಗೊಸ್ಲೊವಿಯ)– ತನ್ನ ಜೀವಮಾನವನ್ನೆಲ್ಲಾ ಕಳ್ಳತನದಲ್ಲೇ ಕಳೆದ 83 ವರ್ಷದ ಸೋವಿಯೋ ಜೋಹಿರಂ 36 ವರ್ಷ ಜೈಲುವಾಸ ಅನುಭವಿಸಿರುವನು – ತನಗೆ ಪೆರ್ಷ ಕೊಡಬೇಕೆಂದು ಸರಕಾರವನ್ನು ಕೇಳಿರುವನು.

●

ಮಲಗುವ ಏರ್ಪಾಡು

ನವದೆಹಲಿ— ಈಗ ರೈಲುಗಳಲ್ಲಿ 1300 ಮಲಗುವ ಗಾಡಿಗಳಿರುವುವೆಂದು ಪ್ರಕಟವಾಗಿದೆ.

★

30 ವರ್ಷವಾಯಿತು

ಸೆಪ್ಟೆಂಬರ್ 1 ರಂದು ವಿಶ್ವದ ಎರಡನೆ ಸಮರ ಪ್ರಾರಂಭದ 30 ನೇ ವಾರ್ಷಿಕೋತವ.

★

ತುಂಡು ಲಂಗ ಬಿಗಿ ಷರಾಯಿ

ಮಡಕೇರಿ– ವೀರರಾಜಪೇಟೆ ಹೈ ಸ್ಕೂಲಿನಲ್ಲಿ ವಿದ್ಯಾರ್ಥಿನಿ ವಿದ್ಯಾರ್ಥಿಗಳು ತುಂಡು ಲಂಗ ಮತ್ತು ಬಿಗಿ ಷರಾಯಿ ಧರಿಸುವದನ್ನು ಪ್ರತಿಬಂಧಿಸಲಾಗಿದೆ – ಇವು ಭಾರತ ಸಂಸ್ಕೃತಿ ಮತ್ತು ನೀತಿಗೆ ಅನುಸಾರವಾಗಿಲ್ಲವೆಂದು ಹೆಡ್ ಮಾಸ್ಟರು ಹೇಳಿದ್ದಾರೆ.

ರಾಷ್ಟ್ರಾಧ್ಯಕ್ಷರ ಅನುಮತಿ

ನವದೆಹಲಿ— 14 ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ರಾಷ್ಟ್ರಾಧ್ಯಕ್ಷರು ಅನುಮತಿ ನೀಡಿದರು.

○

ಭಾರತದಲ್ಲಿ ಅಪಮೌಲ್ಯವಿಲ್ಲ

ಬೆಬಿಂಬಾಯಿ— ಭಾರತದ ನಾಣ್ಯವನ್ನು ಅಪಮೌಲ್ಯ ಮಾಡಬಹುದೆಂಬ ವದಂತಿ ನಿರಾಧಾರವೆಂದು ರಿಜರ್ವ್ ಬ್ಯಾಂಕು ಪ್ರಕಟಿಸಿದೆ.

★

ಭಾರತ ಪತ್ರಿಕೆಗಳಿಗೆ ಪ್ರತಿಬಂಧಕ

ನವದೆಹಲಿ— ಭಾರತ ಪತ್ರಿಕೆಗಳು ಮತ್ತು ಪುಸ್ತಕಗಳು ಪಾಕಿಸ್ಥಾನಕ್ಕೆ ಬರುವದನ್ನು ಅಲ್ಲಿಯ ಸರಕಾರ ಪ್ರತಿಬಂಧಿಸಿದೆ.

●

ಫ್ರಾಂಕ್ ಅಪಮೌಲ್ಯ

ಪ್ಯಾರಿಸ್— ಫ್ರಾನ್ಸು ತನ್ನ ಫ್ರಾಂಕ್ ನಾಣ್ಯವನ್ನು ಅಪಮೌಲ್ಯ ಮಾಡಿತು – ಎರಡನೇ ಪ್ರಪಂಚ ಯುದ್ಧಾನಂತರ ಹೀಗೆ ಮಾಡಿರುವದು ಇದು ಎಂಟನೇ ಸಲ.

★

ಸಪ್ಲಿಮೆಂಟರಿ ಪರೀಕ್ಷೆಗಳು

ಮೈಸೂರು— ವಿಶ್ವವಿದ್ಯಾನಿಲಯದ ಸಪ್ಲಿಮೆಂಟರಿ ಪರೀಕ್ಷೆಗಳು ಆಕ್ಟೋಬರು 15 ರಿಂದ ಪ್ರಾರಂಭವಾಗುತ್ತವೆ.

★

ಮೈಸೂರು ರೇಸಸ್

ಮೈಸೂರು— ಆಗಸ್ಟ್ 20 ರಂದು ಪ್ರಾರಂಭವಾಗುವ ಕುದುರು ಜೂಜಿನ ಎಲ್ಲ ಏರ್ಪಾಡುಗಳೂ ವೈಭವವಾಗಿ ನಡೆಯುತ್ತಿದೆ – 130 ಕ್ಕೂ ಹೆಚ್ಚು ಕುದುರೆಗಳು ಭಾಗವಹಿಸಲಿವೆ – 12 ಬುಕ್‌ಮೇಕರುಗಳಿಗೆ ಲೈಸೆನ್ಸು ಕೊಡಲಾಗಿದೆ – ಟೋಟಲೈಜೇಟರ್, ಡಬ್ಬಲ್, ಟ್ರಿಬಲ್, ಜಾಕ್‌ಪಾಟ್ ಪೂಲ್‌ಗಳಿವೆ – ಒಟ್ಟೀ ಆಕರ್ಷಣೀಯವಾಗಿರುವದೆಂದು ನಿರೀಕ್ಷಿಸಲಾಗಿದೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ನಾಯ್ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ತಕ್ಕಜ್ಞತಾಪೂರ್ವಕವಾಗಿ ನಂಬಿರುತ್ತೇವೆ.

ಸಂಪಾದಕ 'ಸತ್ಯವಾದಿ'

ಚಾಮರಾಜಪುರಂ. ಮೈಸೂರು 4

(2)

ದೆವ್ವಗಳು

ಸಿಂಧ್ರಿಯ ಒಂದು ಸಹಕಾರ ಸಂಘದ ಉಪ-ವ್ಯವಸ್ಥಾಪಕ ಶ್ರೀ ಜ್ಹಾರವರು ತಮ್ಮ ಕೊಠಡಿಗೆ ಇಜ್ಜಲು ಚೂರುಗಳು ಬೀಳುತ್ತಿರುವದನ್ನೂ ಆಥವಾ ಟೀಬಲ್ ಮೇಲೆ ಏಕದಂ ಪೆನ್ಸಿಲ್ ಕಾಣಲ್ಪಡುವುದನ್ನೂ ಕಂಡರು. ದೆವ್ವಗಳ ವಿಷಯದಲ್ಲಿ ನಂಬಿಕೆಯಿಲ್ಲದ ಇವರು, ಇದೆಲ್ಲಾ ಯಾರಸ್ದೋ ಜೇಷ್ಟೆ ಕೆಲಸವೆಂದು ಭಾವಿಸಿದರು. ಕಾಲಕ್ರಮೇಣ ದೆವ್ವದ ಜೇಷ್ಟೆ ಹೆಚ್ಚುತ್ತಾ ಬಂದಿತು. ಸ್ಟೋರ್ಸಿನ ಉಪ ಕಾರ್ಯದರ್ಶಿಯವರು ಸಿಬ್ಬಂದಿಯೊಡನೆ ಇವರ ಮನೆಯಲ್ಲಿ ನಾಲ್ಕು ಗಂಟೆಗಳ ಕಾಲ ಇದ್ದಾಗ ಇಜ್ಜಲು ಚೂರುಗಳ ಭಾರಿ ಸುರಿಮಳೆಯಾಯಿತಲ್ಲದೆ, ಒಂದು ಪೆನ್ಸಿಲ್ಲೂ, ಎಲೆಕ್ಟ್ರಿಕ್ ಬಲ್ಬೂ, ತಿಂಡಿಪದಾರ್ಥಗಳು ಬಿದ್ದವು. ಅಡಿಕೆ ಮನೆಯಲ್ಲಿ ಒಲೆಯ ಮೇಲಿದ್ದ ಒಂದು ಪಾತ್ರೆಯು ಅಲ್ಲಿಂದ ಮಾಯವಾಗಿ ಬಚ್ಚಲು ಮನೆಯಲ್ಲಿ ಕಾಣಿಸಿಕೊಂಡು, ಮತ್ತೆ ಅಡಿಗೆ ಮನೆಯಲ್ಲೇ ಕಂಡುಬಂದಿತು.

ಈ ಆಶ್ಚರ್ಯ ವಿಷಯ ಹೊರಗೆಲ್ಲಾ ಹರಡಿ, ಮನೆ ಮುಂದೆ ಸಹಸ್ರಾರು ಜನ ಸೇರಿದರು. ಪೋಲೀಸರು ಆ ಸ್ಥಳವನ್ನು ಶುಚಿಗೊಳಿಸಲು ಉಪಕ್ರಮಿಸಿದರು. ಮುತ್ತಿತ್ತು. ಈ ಆಶ್ಚರ್ಯ ಕಂಡ ಪೋಲೀಸರಿಗೆ ದಂಗುಬಡಿದಂತಾಯಿತು. ಮಾಟಗಾರರನ್ನು ಆವರ ಅಗಾಧ ಶಕ್ತಿ ಪ್ರದರ್ಶಿಸಲು ಕರೆಸಲಾಯಿತು. ಆವರೂ ವಿಫಲಗೊಂಡರು. (ಎ ಬಿ ಪತ್ರಿಕೆ)

ಇದಕ್ಕೆಲ್ಲೆನ್ನವ ಕಾಟವಲ್ಲದೆ ಬೇರೆ ಸಮಜಾಯಿಷಿ ಇಲ್ಲ. ಆದರೆ ವಿಜ್ಞಾನ ಇದಕ್ಕೆ ವಿವರಣೆ ಕೊಡಲಾರದಿದ್ದು ದೆವ್ವವನ್ನು ಒಪ್ಪುವುದಿಲ್ಲವಾಗಿ, ಸಾರ್ವಜನಿಕ ಒಪ್ಪದಿರಬೇಕಾಗಿದೆ. ಇದು ವಿಜ್ಞಾನ ಯುಗ, ಜನರು ವಿಜ್ಞಾನವನ್ನು ತಿರಸ್ಕರಣೆ ಮಾಡಲಾರದಷ್ಟು ಸೂಕ್ಷ್ಮವಾಗಿದ್ದಾರೆ. [ಟ್ರೂತ್]

ಲಾಲಾ ಲಜಪತ್‌ರಾಯ್‌ರವರು ಪಂಜಾಬು ಯುವಕರಿಗೆ ಬರೆದ ಬಹಿರಂಗ ಪತ್ರದಲ್ಲಿ "ಇಂದು ನಿನಗಿರುವ ಅತ್ಯುತ್ತಮ ನಾಯಕರೆಂದರೆ, ಗಾಂಧೀಜಿಯೆಂದನ್ನ ನಿರ್ಣಯ : ಆವರ ಮಾರ್ಗದರ್ಶನ ಅರಿತುಕೊಂಡು ಅವರು ಹೇಳಿದಂತೆ ನಡೆಯಿರಿ" ಎಂದು ಸಂದೇಶ ನೀಡಿದ್ದರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

SHAKTI SUDHA

A Superb Tonic

ವುಡ್‌ಲ್ಯಾಂಡ್ ಜಯಪ್ರದ 3 ನೇ ವಾರ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮ್ಮೂ, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ ಆನೋಘ 5 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಿಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಾಲನೆದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋದಕ್ಷಿಣೆಗೆ ಬೆಂಬಲ ನೀಡಿ

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4